**ಇಂದು ದಿನಾಂಕಃ 15-09-2025 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ಮತ್ತು 3ನೇ ಪ್ರತಿವಾದಿಯರ ಪರವಾಗಿ ಶ್ರೀ SBK ವಕೀಲರಿಂದಃ-**

ತಾಂಡೂರ-ಹೈದ್ರಾಬಾದ ರಾಜ್ಯ ಹೆದ್ದಾರಿ ಇವೆ ಎಂದರೆ ಸರಿ. ಸದರಿ ಹೆದ್ದಾರಿಯ ಅಗಲ ಮದ್ಯದಿಂದ ಎರಡು ಭಾಗಕ್ಕೆ 31 ಪೀಟ್ ಇದೆ. ಸದರಿ ಹೆದ್ದಾರಿಯ ಮದ್ಯದಿಂದ ಎರಡು ಭಾಗಕ್ಕೆ 75 ಪೀಟ್ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ರೀತಿ 75 ಪೀಟ್ ಅಗಲ ಇರುವ ಬಗ್ಗೆ ಸರಕಾರದ ಅಧಿಸೂಚನೆ ಸಹ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ರಸ್ತೆಯ ಪಕ್ಕದಲ್ಲಿ ಅಂಗಡಿ ಅಥವಾ ಕಟ್ಟಡ ನಿರ್ಮಾಣ ಮಾಡಲು PWD ರವರಿಂದ ಆಕ್ಷೇಪಣೆ ರಹಿತ ಪತ್ರ ಪಡೆಯ ಬೇಕಾಗುತ್ತದೆ ಎಂದರೆ ಸಾಕ್ಷಿ ನನ್ನ ಹತ್ತಿರ ಗ್ರಾಮ ಪಂಚಾಯಿತಿ ಪರವಾನಿಗೆ ಇದೆ ಎಂದು ನುಡಿಯುತ್ತಾರೆ. ಗ್ರಾಮ ಪಂಚಾಯಿತಿರವರು ನನಗೆ ರಸ್ತೆಯ ಮಧ್ಯದಿಂದ 75 ಪೀಟ್ ಬಿಟ್ಟು ಕಟ್ಟಡ ನಿರ್ಮಾಣ ಮಾಡಲು ಪರವಾನಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. ರಸ್ತೆಯ ದಿಕ್ಕಿನಲ್ಲಿ ಅಂಗಡಿಯ ಹೆಬ್ಬಾಗಿಲು ಬಿಡಲು ನನಗೆ ಪರವಾನಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈ ರೀತಿ ರಸ್ತೆ ದಿಕ್ಕಿನಲ್ಲಿ ಬಾಗಿಲು ಬಿಡಲು ಪರವಾನಿಗೆ ನೀಡಿದ್ದಾರೆ ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ಪ್ರತಿವಾದಿಯರ ವಿರುದ್ದ ದಾವೆ ಹೂಡಲು ಅವರ ಮೇಲಾಧಿಕಾರಿಗಳ ಪರವಾನಿಗೆಯನ್ನು ಪಡೆದಿಲ್ಲ. 2 ರಿಂದ 4ನೇ ಪ್ರತಿವಾದಿಯರು ಪಂಚಾಯಿತ ರಾಜ್ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಾರೆ ಎಂದರೆ ಸರಿ. ತಾಂಡೂರ-ಜಹೀರಾಬಾದ ರಸ್ತೆ ಅಗಲಿಕರಣ ಆಗುವುದು ಇದೆ ಎಂದರೆ ಸರಿ. ಸಾರ್ವಜನಿಕರಿಗೆ ಸತಾಯಿಸಲು ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 2 ರಿಂದ 4ನೇ ಪ್ರತಿವಾದಿಯರಿಗೆ ಭಯ ಪಡಿಸಿ ಸದರಿ ಆಸ್ತಿಯಲ್ಲಿ ಅಂಗಡಿ ನಿರ್ಮಾಣ ಮಾಡಲು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಸತಾಯಿಸಲು ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**